No. of Printed Pages : **2**

**45134**

# B.A. I Semester Degree Examination, March/April - 2023

## ಐಚ್ಛಿಕ ಕನ್ನಡ

## Paper No. DSC-2 : ಮಧ್ಯಕಾಲೀನ ಕನ್ನಡ ಸಾಹಿತ್ಯ ಚರಿತ್ರೆ

## (NEP)

Time : 2 Hours | Maximum Marks : 60

***ಸೂಚನೆ :*** *ಭಾಷೆ ಹಾಗೂ ಬರಹದ ಶುದ್ಧಿಗೆ ಗಮನಕೊಡಲಾಗುವುದು.*

**ವಿಭಾಗ – ಎ**

ಕೆಳಗಿನ **ಎಲ್ಲಾ** ಉಪ-ಪ್ರಶ್ನೆಗಳಿಗೆ ಉತ್ತರಿಸಿರಿ. **10x1=10**

**1.** (a) ‘ರಾಮನಾಥ’ ಎಂಬುದು ಯಾರ ವಚನಾಂಕಿತ ?

(b) ‘ರಗಳೆಯ ಕವಿ’ ಎಂದು ಪ್ರಸಿದ್ಧನಾದ ಕವಿ ಯಾರು ?

(c) ರಾಘವಾಂಕ ಬಳಸಿದ ವಿಶೇಷ ಷಟ್ಪದಿ ಯಾವುದು ?

(d) ದಾಸ ಸಾಹಿತ್ಯದ ಅಶ್ವಿನಿ ದೇವತೆಗಳು ಯಾರು ?

(e) ಲಕ್ಷೀಶ ರಚಿಸಿದ ಕಾವ್ಯ ಯಾವುದು ?

(f) “ರೂಪಕ ಸಾಮ್ರಾಜ್ಯದ ಚಕ್ರವರ್ತಿ” ಎಂದು ಬಿರುದಾಂಕಿತನಾದ ಕವಿ ಯಾರು ?

(g) ಪುರಂದರದಾಸರ ಪೂರ್ವಾಶ್ರಮದ ಹೆಸರೇನು ?

(h) ಸಂಚಿಯ ಹೊನ್ನಮ್ಮ ರಚಿಸಿದ ಕೃತಿ ಯಾವುದು ?

(i) ಅಮುಗೆ ರಾಯಮ್ಮನ ವಚನಾಂಕಿತವೇನು ?

(j) ‘ಶೃಂಗಾರ ಕವಿ’ ಎಂದು ಬಿರುದಾಂಕಿತನಾದ ಕವಿ ಯಾರು ?

**ವಿಭಾಗ – ಬಿ**

ಈ ಕೆಳಗಿನವುಗಳಲ್ಲಿ **ಯಾವುದಾದರೂ ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿರಿ. **4x5=20**

**2.** ‘ರಗಳೆ’ ಸಾಹಿತ್ಯದ ಸ್ವರೂಪ, ವೈಶಿಷ್ಟ್ಯ ಮತ್ತು ಮಹತ್ವವನ್ನು ವಿವರಿಸಿ.

**3.** ಜೇಡರ ದಾಸಿಮಯ್ಯನ ಜೀವನ ಮತ್ತು ಸಾಹಿತ್ಯವನ್ನು ಕುರಿತು ಬರೆಯಿರಿ.

4. ಅಕ್ಕಮಹಾದೇವಿ ಬದುಕಿನ ಧೋರಣೆಯನ್ನು ಆಕೆಯ ವಚನಗಳ ಹಿನ್ನೆಲೆಯಲ್ಲಿ ವಿವರಿಸಿ.

5. ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳಲ್ಲಿ ವ್ಯಕ್ತವಾಗಿರುವ ಜೀವನ ಸಿದ್ಧಾಂತವನ್ನು ವಿಶ್ಲೇಷಿಸಿ ಬರೆಯಿರಿ.

6. ಸರ್ವಜ್ಞನ ಜೀವನ ಮತ್ತು ಅವನ ತ್ರಿಪದಿಗಳಲ್ಲಿ ವ್ಯಕ್ತವಾಗಿರುವ ಸಾಮಾಜಿಕ ಕಳಕಳಿಯನ್ನು ವಿವರಿಸಿ.

7. ರಾಘವಾಂಕನ ಜೀವನ ಮತ್ತು ಅವನ ಕೃತಿಗಳ ಬಗ್ಗೆ ವಿವರಿಸಿ.

**ವಿಭಾಗ – ಸಿ**

ಈ ಕೆಳಗಿನ **ಯಾವುದಾದರೂ ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. **3x10=30**

8. ಮಧ್ಯಕಾಲೀನ ಕನ್ನಡ ಸಾಹಿತ್ಯದ ಪ್ರೇರಣೆ ಮತ್ತು ಧೋರಣೆಗಳನ್ನು ಕುರಿತು ವಿಶ್ಲೇಷಿಸಿ ಬರೆಯಿರಿ.

9. ಅಲ್ಲಮಪ್ರಭು ಮತ್ತು ಸಿದ್ಧರಾಮರ ವಚನಗಳನ್ನು ಮಧ್ಯಕಾಲೀನ ಸಂದರ್ಭದ ಹಿನ್ನೆಲೆಯಲ್ಲಿ ವಿವರಿಸಿ.

10. ಹರಿಹರನ ಜೀವನ ಮತ್ತು ಸಾಹಿತ್ಯ ಕೃತಿಗಳ ಕುರಿತು ವಿವರಿಸಿ.

11. ಕನಕದಾಸರ ಜೀವನ ವಿವರಗಳನ್ನು ಅವರ ಕೀರ್ತನೆ ಮತ್ತು ಕೃತಿಗಳ ಹಿನ್ನೆಲೆಯಲ್ಲಿ ವಿವರಿಸಿರಿ.

12. ನಡುಗನ್ನಡ ಸಾಹಿತ್ಯದ ರೂಪಗಳಾದ ತ್ರಿಪದಿ ಮತ್ತು ಷಟ್ಪದಿಗಳ ಸ್ವರೂಪ, ಮಹತ್ವ ಮತ್ತು ವೈಶಿಷ್ಟ್ಯತೆಯನ್ನು ವಿವರಿಸಿ.

- o 0 o -